# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ | : | 604 |
| ಸದಸ್ಯರ ಹೆಸರು | : | ಶ್ರೀ.ಕೇಶವ ಪ್ರಸಾದ್‌ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸುವ ದಿನಾಂಕ | : | 20-02-2023 |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಹವಾಮಾನ ವೈಪರೀತ್ಯ, ಪ್ರಕೃತಿ ವಿಕೋಪ ಹಾಗೂ ಬೆಲೆ ಕುಸಿತದಿಂದ ದ್ರಾಕ್ಷಿ ಬೆಳೆಗಾರರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಸರ್ಕಾರದ ಗಮನಕ್ಕೆ ಬಂದಿದೆ.</td></tr>
<tr><td>ಆ</td><td>ದ್ರಾಕ್ಷಿ ಬೆಳೆ ಹಾನಿಯಿಂದ ರೈತರಿಗೆ ಆದ ನಷ್ಟದ ವಿವರ ಹಾಗೂ ನಷ್ಟ ಅನುಭವಿಸಿದ ಬೆಳೆಗಾರರಿಗೆ ಸರ್ಕಾರವು ಸಹಾಯ ಧನ ನೀಡಿದೆಯೇ; ನೀಡಿದ್ದಲ್ಲಿ, ಅದರ ವಿವರ ನೀಡುವುದು.</td><td>2023-24ನೇ ಸಾಲಿನಲ್ಲಿ ಹವಾಮಾನ ವೈಪರಿತ್ಯ ಮತ್ತು ಪ್ರಕೃತಿ ವಿಕೋಪದಿಂದ ಒಟ್ಟು 170.98 ಹೆಕ್ಟೇರ್‌ಗಳಲ್ಲಿ ದ್ರಾಕ್ಷಿ ಬೆಳೆಗೆ ಹಾನಿಯಾಗಿರುವುದಾಗಿ ಅಂದಾಜಿಸಲಾಗಿದೆ. ವಿವರ ಕೆಳಗಿನಂತಿದೆ.
<table>
<tr><th>ಪ್ರದೇಶ</th><th>ಹಾನಿಗೊಳಗಾದ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)</th><th>ರೈತರ ಸಂಖ್ಯೆ</th><th>ಹಾನಿಯ ಪ್ರಮಾಣ (NDRF ಪ್ರಕಾರ) ಪ್ರತಿ ಹೆಕ್ಟೇರ್‌ಗೆ ರೂ.22500/-ರಂತೆ (ರೂ.ಲಕ್ಷಗಳಲ್ಲಿ)</th></tr>
<tr><td>ಅಥಣಿ</td><td>105.73</td><td>153</td><td>23.79</td></tr>
<tr><td>ಕಾಗವಾಡ</td><td>65.25</td><td>131</td><td>14.68</td></tr>
<tr><td>ಒಟ್ಟು</td><td>170.98</td><td>284</td><td>38.47</td></tr>
</table>
ಈ ಕುರಿತಂತೆ ತಾಲ್ಲೂಕು ತಹಶೀಲದಾರ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖಾ ಅಧಿಕಾರಿಗಳು ಜಂಟಿ ಸಮೀಕ್ಷೆ ನಡೆಸಿ ವರದಿ ಸಿದ್ಧಪಡಿಸಿರುತ್ತಾರೆ. NDRF /SDRF ಮಾರ್ಗಸೂಚಿಗಳನ್ವಯ ಬಹುವಾರ್ಷಿಕ ಬೆಳೆಗಳಿಗೆ 2 ಹೆಕ್ಟೇರ್‌ವರೆಗೆ ಪರಿಹಾರ ನೀಡಲಾಗುತ್ತಿದೆ. ಈ ಬಗ್ಗೆ ಕಂದಾಯ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
<tr><td>ಇ</td><td>ಬೆಲೆ ಕುಸಿತ ತಡೆಗಟ್ಟುವ ನಿಟ್ಟಿನಲ್ಲಿ ದ್ರಾಕ್ಷಿ/ ಒಣ ದ್ರಾಕ್ಷಿಗೆ ಬೆಂಬಲ ಬೆಲೆ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;</td><td rowspan="2">ಬೆಲೆ ಕುಸಿತ ತಡೆಗಟ್ಟುವ ನಿಟ್ಟಿನಲ್ಲಿ ಒಣದ್ರಾಕ್ಷಿಗೆ ಬೆಂಬಲ ಬೆಲೆ ನೀಡುವಂತೆ ಕೋರಿ ದಿನಾಂಕ: 01.12.2023ರ ಪತ್ರದಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.</td></tr>
<tr><td>ಈ</td><td>ರೈತರಿಂದ ನೇರವಾಗಿ ಒಣ ದ್ರಾಕ್ಷಿ ಖರೀದಿಸುವ ಚಿಂತನೆ ಸರ್ಕಾರದ ಮುಂದಿದೆಯೇ;</td></tr>
<tr><td>ಉ</td><td>ಶಾಲಾ ಮಕ್ಕಳಿಗೆ ಹಾಗೂ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಪೋಷಕಾಂಶಗಳ ಕೊರತೆಯ ಆಗರವಾಗಿರುವ ಒಣದ್ರಾಕ್ಷಿಯನ್ನು ನೀಡುವ ಪ್ರಸ್ತಾವ/ ಚಿಂತನೆ ಸರ್ಕಾರದ ಮುಂದಿದೆಯೇ?</td><td>ಶಾಲಾ ಮಕ್ಕಳಿಗೆ ಹಾಗೂ ಹಾಸ್ಟೇಲ್ ವಿದ್ಯಾರ್ಥಿಗಳಿಗೆ ಪೋಷಕಾಂಶಗಳ ಆಗರವಾಗಿರುವ ಒಣದ್ರಾಕ್ಷಿಯನ್ನು ನೀಡುವ ಪ್ರಸ್ತಾವ/ ಚಿಂತನೆ ಸರ್ಕಾರದ ಮುಂದಿರುವುದಿಲ್ಲ.</td></tr>
</table>

HORTI 78 HGM 2024

**(ಎಸ್.ಎಸ್.ಮಲ್ಲಿಕಾರ್ಜುನ್)**

ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು